'ಇವೊತ್ತಿನ ಕವಿಗಳಲ್ಲಿ ಪ್ರತಿಭೆಯೇ ಕಡಿಮೆಯೇನೋ, ಅಥವಾ ದಿನನಿತ್ಯದ ಅನುಭವಗಳಲ್ಲಿ ಕಾವ್ಯವನ್ನು ಕಾಣುವ ಸಾಮಾನ್ಯ ಅನುಭವಗಳಿಗೆ ಪ್ರತಿಮಿಡಿಯುವ ಶಕ್ತಿಯೇ ಬತ್ತಿಹೋಗಿದೆಯೇನೋ.'

## ಕಾವ್ಯ ಶಕ್ತಿ-ಚೈತನ್ಯ

'ನನಗೆ ಸಮಾಧಿ ಸ್ಥಿತಿಯಲ್ಲಿ ಕಾವ್ಯ ಬರೆಯುವುದು ಆಗದ ಕೆಲಸ. ಬಿಳಿ ಹಕ್ಕಿ ಹಾರಿದಾಗ, ಕಾಸಬಂಗಲೆಯ ಮೃಗರಾಜನನ್ನು ಬೋನೊಳಗೆ ನೋಡಿದಾಗ ಬೀದಿ ಸೂಳೆಯನ್ನು ಕಂಡವನೇ ಅವಳ ಔದಾರ್ಯ ಬುದ್ಧಿಯ ಬಗ್ಗೆ ಯೋಚನೆ ಬಂದು ಸಮಾಧಿಸ್ಥಿತಿ ಮುಟ್ಟುತ್ತಿದ್ದ ರಾಮಕೃಷ್ಣ ಪರಮಹಂಸರ ಮಾತು ಬೇರೆ. ಅವರ ಈ ಸ್ಥಿತಿ ಸಾಚಾ. ಅದೇ ರೀತಿ ಎಲ್ಲ ಎಲ್ಲ ಅನುಭವಗಳಲ್ಲಿ ಕಾವ್ಯವಸ್ತು ಕಾಣುವಂತಾಗಬೇಕು.

'ನನ್ನ ಕವನಗಳಿಗೆ ಮೈಯ ಬಿಸಿ ಸಾಕು. ಹೆಚ್ಚೂ ಬೇಡ. ಕಡಿಮೆಯೂ ಬೇಡ.

'ನನ್ನ ಕಾವ್ಯಕ್ಕೆ ಅಡಿಗಲ್ಲು ವಸ್ತುಪ್ರಪಂಚ. ನಾನು ಆರಿಸಿಕೊಳ್ಳುವ ಕೆಲಸವೇ ವಸ್ತುವೊಂದರಲ್ಲಿ ವಿಶೇಷವಾದೊಂದು ನನಗೆ ಅನುಭವವಾದದ್ದಕ್ಕೆ ಸಾಕ್ಷಿ. ನಾನು ನಿಂತು, ಕೊಡುವ ವಿವರಗಳಲ್ಲಿ ಸಿಕ್ಕದ **Significance** ನನ್ನ ಕಾವ್ಯದ ಹೊರಗಿದ್ದರೂ ಆಯಿತು. ನನಗೆ ಅದರಲ್ಲಿ ಕಿಂಚಿತ್ತೂ ಆಸಕ್ತಿಯಿಲ್ಲ.

'ನನ್ನ ಚಿಂತನೆಯ ಹಿಂದೆ **William carlos Williams** ಆಡಿದ ಒಂದು ಸತ್ಯ ಮಿಡಿಯುತ್ತಿರಬೇಕು. ಅವನಂದ: **There are no thoughts but in things.**

'ಅಡಿಗರ ಗಮನ ಉದ್ದಕ್ಕೂ, ವಿವರಗಳನ್ನು ಕೊಟ್ಟು ಒಂದು ಪ್ರತಿಮೆ ಅಥವಾ ಅನುಭವ ಕಣ್ಣಿಗೆ ಕಟ್ಟಿದ ಹಾಗೆ ಮಾಡುವಾಗಲೂ ಹೇಳಬಯಸುವ ಸತ್ಯಗಳ ಕಡೆಗೆ. ನನ್ನ ಸತ್ಯ—ಇದ್ದದ್ದೇ ಆದರೆ—ಹೇಳಿರುವ ವಿವರಗಳಲ್ಲಿ.

## ಪ್ರತಿಮಾ ವಿಲಾಸ ಸ್ವಾರಸ್ಯ

ತೆಲುಗು, ತಮಿಳು, ಮಲಯಾಳಂ, ಕನ್ನಡದ ಜ್ಞಾನ: ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿ ಅಧ್ಯಾಪಕರಾಗಿ, ಇಂಗ್ಲಿಷ್ ಭಾಷೆ ಆಡುವ ಒಂದು ನಾಡಲ್ಲಿ ಹತ್ತು ವರ್ಷಗಳಿಂದ ಇದ್ದು ಜೊತೆಗೆ ಇಂಗ್ಲಿಷಿನಲ್ಲಿ ಕಾವ್ಯ ಬರೆದು ತಿದ್ದಿದ ಒಂದು ಮನೋಭಾವ, ಇಷ್ಟೆಲ್ಲಾ ತರಬೇತು, ಮಾತು ಮಾತಿನ ಬಗೆಗೆ ಭಾಷಾಶಾಸ್ತ್ರ ಕಲಿಸಿದ ವಿಮರ್ಶಾತ್ಮಕ ಪ್ರಜ್ಞೆ ಕನ್ನಡ ಕಾವ್ಯ ರಚನೆಗೆ ಬಂದಿದೆ ರಾಮಾನುಜನ್ ಅವರ ಪ್ರಯತ್ನದಲ್ಲಿ. ಊಟಕ್ಕೆ ಬಂದು ಹೋದ ಸಂಗಾತಿ ಮೇಜಿನ ಮೇಲೆ ಬಿಟ್ಟ ಅರ್ಧ ತಿಂದ ಬ್ರೆಡ್ಡಿನಲ್ಲಿ ಅವಳುಳಿಸಿದ ಹಲ್ಲು ಗುರುತನ್ನು ವರ್ಣನೆ ಮಾಡಿ ಮರೆಗಿರುವ ಒಂದು ಪ್ರಪಂಚವನ್ನೇ ತೆರೆದು ತೋರುವ ಶಕ್ತಿ(Still Life) ಕನ್ನಡದಲ್ಲೂ ಅದೇ ತರಹದ ಕೆಲಸ ಮಾಡಹೊರಟಿದೆ.

'ಮೈ ಉರಿಯುವ ಕೋಪದಲ್ಲಿ ಮನೆಗೆ ಬಂದೆ
ಹೊರಗೆ ತೋಟ.
ಕೆಂಡ ಸಂಪಿಗೆ ಮರ ಹೂ ಬಿಟ್ಟು ನಿಂತಿತ್ತು'

(—ಹೊಕ್ಕುಳಲ್ಲಿ ಹೂವಿಲ್ಲ)

ಆ ಪ್ರತಿಮೆಯಲ್ಲಿರುವ ಸ್ವಾರಸ್ಯ, ಮಾತುಗಳನ್ನು ಜೋಡಿಸಿರುವ ರೀತಿಯಲ್ಲಿನ ಚಮತ್ಕಾರ ಕೇವಲ ಬುದ್ಧಿಯದಷ್ಟೇ ಅಲ್ಲ. ಈ ಮೂರು ಸಾಲುಗಳಲ್ಲಿರುವ ಧ್ವನಿಶಕ್ತಿ,